ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ.**199/2025**

ಸಾಕ್ಷಿಯ ಹೆಸರುಃ ಸಾವಿತ್ರಿ ಚಾಸಾ ಃ 2

ಗಂಡನ ಹೆಸರುಃ ಸುರೇಶ ಬಿ ಎನ್ ಪ್ರಾಸಾಃ 1

ವಯಸ್ಸುಃ 41 ವರ್ಷ

ಉದ್ಯೋಗಃ ಕೂಲಿ ಕೆಲಸ

ವಾಸಃ ಬಗ್ಗುಂಜಿ, ಹೆದ್ಸೆ ಗ್ರಾಮ

ದಿನಾಂಕಃ27/02/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ 1 ನನ್ನ ಯಜಮಾನರು, ಚಾಸಾ 3 ನನ್ನ ಮಗಳು, ಚಾಸಾ 4 ಹಾಗೂ 5 ನನ್ನ ಬಾವಂದಿರು, ಚಾಸಾ 6 ನನ್ನ ಅತ್ತಿಗೆಯಾಗಬೇಕು. ಚಾಸಾ 7 ನನ್ನ ಅತ್ತೆಯಾಗಬೇಕು.

ನ್ಯಾಯಾಲಯದ ಮುಂದಿರುವ ಆರೋಪಿತರು ನನಗೆ ಗೊತ್ತು.

ದಿನಾಂಕಃ18/04/2025 ರಂದು 11 ಗಂಟೆಗೆ 1 ನೇ ಆರೋಪಿ ಹಾಗೂ ಚಾಸಾ1 ರವ ರ ನಡುವೆ ಜಗಳವಾಗಿರುತ್ತದೆ. ಮಧ್ಯಾಹ್ನ 3-30 ರ ಸಮಯಕ್ಕೆ ಮನೆ ಒಳಗೆ ನುಗ್ಗಿ ಬಂದು ಗಲಾಟೆ ಮಾಡಿರುತ್ತಾರೆ. ಚಾಸಾ 1 ರವರಿಗೆ ಆರೋಪಿ ಹೊಡೆದು ಹಲ್ಲೆ ಮಾಡಿದ್ದರಿಂದ ಚಿಕಿತ್ಸೆಗಾಗಿ ನಂತರ ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಗೆ ಚಾಸಾ 1 ರವರನ್ನು ಕರೆದುಕೊಂಡು ಹೋದೆವು. ನಂತರ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ. ನಂತರ ಚಾಸಾ 1 ರವರು ದಿನಾಂಕಃ20/04/2025 ರಂದು ಮೃತಪಟ್ಟಿರುತ್ತಾರೆ.

ನಾನು ಪ್ರಕರಣದಲ್ಲಿ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಒಂದು ಮರದ ದೊಣ್ಣೆಯನ್ನು ಸಾಕ್ಷಿ ಗುರುತಿಸಿದ್ದು ಸದರಿ ದೊಣ್ಣ 2 ನೇ ಆರೋಪಿಯ ಕೈಯಲ್ಲಿತ್ತು ಎನ್ನುತ್ತಾರೆ. ಸದರಿ ದೊಣ್ಣೆಯನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ

ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)

ಪಾಟೀ ಸವಾಲು ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಪೋಲಿಸರು ನನ್ನನ್ನು ವಿಚಾರಿಸಿದಾಗ ದಿಃ08/03/2025 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಸದರಿ ಹೇಳಿಕೆಯ ಪ್ರಕಾರ ಕೃತ್ಯಕ್ಕೂ ಪೂರ್ವದಲ್ಲಿ ಚಾಸಾ 1 ಹಾಗೂ ಎದುರು ಇರುವ ಆರೋಪಿಗೂ ಕೋಳಿ ವಿಚಾರದಲ್ಲಿ ಜಗಳವಾಗಿತ್ತು.ಸದರಿ ವಿಚಾರದಲ್ಲಿ 1 ನೇ ಆರೋಪಿ ಚಾಸಾ 1 ರವರೊಂದಿಗೆ ಜಗಳವಾಡುತ್ತಿದ್ದರು ಎಂದರೆ ಸರಿ.

ದಿಃ18/01/2025 ರಂದು ಚಾಸಾ 1 ಹಾಗೂ ಚಾಸಾ 3 ರವರು ಮನೆಯಲ್ಲಿದ್ದರು. ಸದರಿ ಸಮಯದಲ್ಲಿ 1 ನೇ ಆರೋಪಿ ಹಾಗೂ ಅವರ ಸ್ನೇಹಿತರಾದ 2 ಹಾಗೂ 3 ನೇ ಆರೋಪಿತರು ಮನೆ ಬಳಿ ಬಂದು ಚಾಸಾ 1 ರವರಿಗೆ ಅವಾಚ್ಯವಾಗಿ ಬೈದು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ ಎದರೆ ಸರಿ.  ಸದರಿ ದೊಣ್ಣೆಯಿಂದ ಚಾಸಾ 1 ರವರ ಮೈಕೈಗೆ ಭುಜ ಸೊಂಟಕ್ಕೆ ಹೊಡೆದು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. 2 ಹಾಗೂ 3 ನೇ ಆರೋಪಿತರು ಚಾಸಾ 1 ರವರಿಗೆ ಕಾಲಿಂದ ತುಳಿದು ಒದ್ದು ನೋವುಂಟುಮಾಡಿ ಅವಮಾನ ಮಾಡಿರುತ್ತಾರೆ ಎಂದರೆ ಸರಿ.  ಆಗ ಚಾಸಾ 1 ರವರು ನೋವಿಂದ ಕೂಗಿಕೊಂಡಾಗ ನಾನು ಹಾಗೂ  ಚಾಸಾ 3 ರವರು ಹೋಗಿ ಗಲಾಟೆ ಬಿಡಿಸಿರುತ್ತೇವೆ ಎಂದರೆ ಸರಿ.  ಹಲ್ಲೆ ಮಾಡಿದ ದೊಣ್ಣೆಯನ್ನು ಆರೋಪಿತರು ಅಲ್ಲೇ ಬಿಸಾಡಿ ಹೋಗಿದ್ದರು ಎಂದರೆ ಸರಿ. ನಂತರ ಸದರಿ ಹಲ್ಲೆಯಿಂದಾಗಿ ಚಾಸಾ1  ದಿಃ19/01/2025 ರಂದು  ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿದ್ದರು ಎಂದರೆ ಸರಿ.

ಪಾಟೀ ಸವಾಲು ಆರೋಪಿತರ ಪರ ಃ ಶ್ರೀ ಬಿವಿಜಿ ವಕೀಲರಿಂದಃ

ಕೃತ್ಯ ನಡೆದಿದೆ ಎನ್ನಲಾದ ದಿನದಂದು ನಾನು ಮನೆಯಲ್ಲಿರಲಿಲ್ಲ ಎಂದರೆ ಸರಿ. ನಡೆಯಿತು ಎನ್ನಲಾದ ಗಲಾಟೆಯನ್ನು ನಾನು ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಎಂದರೆ ಸರಿ. ಮುದ್ದುಮಾಲು ದೊಣ್ಣೆಯನ್ನು ನಾನೇ ತಂದು ಪೋಲಿಸರ ಮುಂದೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ.  ಮುದ್ದೆ ಮಾಲು ನಮ್ಮ ಮನೆಯಲ್ಲೇ ಇತ್ತು ಎಂದರೆ ಸರಿ.  ಕೃತ್ಯವನ್ನು ನಾನು ಕಣ್ಣಾರೆ ನೋಡದೆ ಇರುವುದರಿಂದ ಕೃತ್ಯದ ಬಗ್ಗೆ ನನಗೆ ನಿರ್ದಿಷ್ಟವಾಗಿ ಗೊತ್ತಿರುವುದಿಲ್ಲ ಎಂದರೆ ಸರಿ.

ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ಚೆಕ್ಕುಬಂಧಿಯನ್ನು ನನಗೆ ಹೇಳಲು ಸಾಧ್ಯವಾಗುವುದಿಲ್ಲ.

ಚಾಸಾ 1 ರವರು ಚಿಕ್ಕಮಗಳೂರಿನಲ್ಲಿ ಹಾಗೂ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆ ಹಾಗೂ ಬೇರೆ ಬೇರೆ ಕಡೆ ಅನಾರೋಗ್ಯಕ್ಕಾಗಿ ಚಿಕಿತ್ಸೆ ಪಡೆದಿದ್ದರು ಎಂದರೆ ಸರಿ.

ಚಾಸಾ 1 ರವರು ಅನಾರೋಗ್ಯಕ್ಕಾಗಿ ಅವರು ಮೃತಪಡುವ ಪೂರ್ವದಲ್ಲಿ ಒಂದು ತಿಂಗಳ ಕಾಲ ಚಿಕಿತ್ಸೆ ಪಡೆದಿದ್ದರು. 2025 ರ ಜನವರಿ ತಿಂಗಳಲ್ಲಿ ಚಾಸಾ 1 ರವರು ತೀರ್ಥಹಳ್ಳಿ ಆಸ್ಪತ್ರೆಯಲ್ಲಿ ಚಾಸಾ 1 ರವರು ಯಾವುದೆ ರೀತಿಯ ಚಿಕಿತ್ಸೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುದ್ದೆಮಾಲಿಗೂ ಪ್ರಕರಣಕ್ಕೂ , ಆರೋಪಿತರಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಪೂರ್ವದಲ್ಲಿ ಚಾಸಾ 1 ರವರು 1 ನೇ ಆರೋಪಿತರ ಮೇಲೆ ಹಲ್ಲೆ ಮಾಡಿದ್ದರ ಸಂಬಂಧವಾಗಿ ಜೈಲಿನಲ್ಲಿದ್ದು ನಾನೇ ಜಾಮೀನು ಮೇಲೆ ಬಿಡಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದ ಸಂಖ್ಯೆ ಸಿಸಿ 327/2024 ಆಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣದ ಸಂಬಂದ ಚಾಸಾ 1 ರವರು 7 ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದರು ಎಂದರೆ ಸರಿ. ಚಾಸಾ 1 ರವರು ನ್ಯಾಯಾಂಗ ಬಂಧನದಿಂದ ಹೊರಗೆ ಬಂದ ಮೇಲೆ ದ್ವೇಷದಿಂದ ಸದರಿ ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ನಮಗೂ ತುಂಬಾ ದಿನಗಳಿಂದ ದ್ವೇಷ ಇತ್ತು ಎಂದರೆ ಸರಿ.

ಕೃತ್ಯ ನಡೆದಿದೆ ಎನ್ನಲಾದ ಸ್ಥಳ ದಲ್ಲಿ ಸಾಕಷ್ಟು ಮನೆಗಳು ಇರುತ್ತವೆ ಎಂದರೆ ಸರಿ. ಒಂದು ವೇಳೆ ನಾನು ನುಡಿದಂತೆ ಗಲಾಟೆ ನಡೆದ ಪಕ್ಷದಲ್ಲಿ ಅಕ್ಕ ಪಕ್ಕದವರು ಗಲಾಟೆ ಬಿಡಿಸುತ್ತಿದ್ದರು ಎಂದರೆ ಸರಿ.

ಪ್ರಕರಣದ ಸಾಕ್ಷಿದಾರರೆಲ್ಲರೂ ನನಗೆ ಸಂಬಂಧಿಕರಾಗಬೇಕು ಎಂದರೆ ಸರಿ. ಸದರಿಯವರನ್ನು ಸೇರಿಸಿಕೊಂಡು ಸದರಿ ಪ್ರಕರಣ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೆ ಗಲಾಟೆ ಮಾಡಿರುವುದಿಲ್ಲ, ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಆರೋಪಿತರು ಹಲ್ಲೆ ಮಾಡದೆ ಇದ್ದರೂ ಸಹಾ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ